Bapuji Educational Association (R.)

# R.L. Law College

Akkamahadevi Road, P.J. Extension, DAVANGERE – 2 (Karnataka)
Affiliated to Karnataka State Law University, Hubli. Recognised by the Bar Council of India – New Dehli.
NAAC Accredited – 'B+'

ಆರ್.ಎಲ್. ಕಾನೂನು ಕಾಲೇಜು

ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ,ದಾವಣಗೆರೆ– 2

Offce: 08192 – 250237
Website : WWW.rllcdvg.org
Email : rllc_dvg@yahoo.com

Ref. No. RLLC/ Date…………......

## INTERNATIONAL WOMENS DAY CELEBRATED ON 16/03/2026

On 16th March 2026 our college has organized international woman's day, Padmashree Dr. Maata B. Manjamma Jogati was the Resource person and inaugurated the program. Sri K.S. Veerabhadrappa Epigrammatist has invited as guest to the program. Dr. M. Somashekarappa Director was present; Sri B.P. Basavanagouda B.P. Principal R.L. Law College, Davangere was rendered presidential remarks. Smt. Trupthi G.H. was the coordinator to the program. About 200 students, teaching and non-teaching staff were participated in the program.























ದಾವಣಗೆರೆಯ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಸೋಮವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಪದ್ಮಶ್ರೀ ಪುರಸ್ಕೃತ ಜಾನಪದ ಕಲಾವಿದೆ ಡಾ. ಮಂಜಮ್ಮ ಜೋಗತಿ ಉದ್ಘಾಟಿಸಿದರು.

## ಸೋಲಿಗೆ ಹೆದರಿ ಆತ್ಮಹತ್ಯೆ ನಿರ್ಧಾರ ಬೇಡ: ಮಂಜಮ್ಮ

**ದಾವಣಗೆರೆ:** ಸಣ್ಣಪುಟ್ಟ ಸೋಲುಗಳಿಗೆ ಹೆದರಿ ಆತ್ಮಹತ್ಯೆಯಂತಹ ನಿರ್ಧಾರ ತೆಗೆದುಕೊಳ್ಳಬೇಡಿ. ಸುಖ-ದುಃಖಗಳನ್ನು ಸಮಾನವಾಗಿ ಸ್ವೀಕರಿಸಿ ಧೈರ್ಯದಿಂದ ಮುನ್ನಡೆಯಬೇಕು ಎಂದು ಪದ್ಮಶ್ರೀ ಪುರಸ್ಕೃತ ಜಾನಪದ ಕಲಾವಿದೆ ಡಾ. ಮಂಜಮ್ಮ ಜೋಗತಿ ಕರೆ ನೀಡಿದರು.

ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಸೋಮವಾರ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

''ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ಸಣ್ಣಪುಟ್ಟ ಸೋಲುಗಳಿಗೆ ಎದೆಗುಂದುತ್ತಿರುವುದು ಸರಿಯಲ್ಲ. ಪರೀಕ್ಷೆಯಲ್ಲಿ ಫೇಲಾದ ಕಾರಣಕ್ಕೆ, ಪ್ರೀತಿಯಲ್ಲಿ ಸೋತಿರುವುದಕ್ಕೆಲ್ಲಾ ಆತ್ಮಹತ್ಯೆಯಂತಹ ನಿರ್ಧಾರ ತೆಗೆದುಕೊಳ್ಳಬಾರದು'' ಎಂದರು.

''ಬಡತನ, ಸಿರಿತನ ಯಾವುದು ಶಾಶ್ವತವಲ್ಲ. ಜೀವನದಲ್ಲಿ ಎದುರಾಗುವ ಸೋಲುಗಳನ್ನು ಧೈರ್ಯವಾಗಿ ಎದುರಿಸಿ ಮುನ್ನಡೆಯಬೇಕು. ಮಕ್ಕಳಿಗೆ ಆಸ್ತಿ ಮಾಡುವುದಕ್ಕಿಂತ ಅವರಿಗೆ ಉತ್ತಮ ಶಿಕ್ಷಣ ಕೊಡಿಸಬೇಕು'' ಎಂದರು.

ಕಾಲೇಜಿನ ನಿರ್ದೇಶಕ ಡಾ.ಎಂ. ಸೋಮಶೇಖರಪ್ಪ, ಕಾಲೇಜಿನ ಪ್ರಾಚಾರ್ಯ ಪ್ರೊ.ಬಿ.ಪಿ. ಬಸವನಗೌಡ, ಐಕ್ಯೂಎಸಿ ಸಂಚಾಲಕ ಕೆ.ಎನ್. ಪ್ರದೀಪ್, ಜಿ.ಎಚ್. ತೃಪ್ತಿ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ ತೆಲಿಗಿ ಇತರರಿದ್ದರು.

## ಜಾನಪದ ಕಲಾವಿದೆ ಮಂಜಮ್ಮ ಜೋಗತಿ ಆಶಯ | ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

# ತೃತೀಯ ಲಿಂಗಿಗಳಿಗೆ ಮೀಸಲಾತಿ ದೂರವಿಲ್ಲ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಮಹಿಳಾ ಮೀಸಲಾತಿ ರೀತಿಯಲ್ಲಿ ತೃತೀಯ ಲಿಂಗಿಗಳಿಗೂ ಮೀಸಲಾತಿ ಸಿಗುವ ದಿನ ದೂರವಿಲ್ಲ ಎಂದು ಹಿರಿಯ ಜಾನಪದ ಕಲಾವಿದೆ ಪದ್ಮಶ್ರೀ ಮಂಜಮ್ಮ ಜೋಗತಿ ಆಶಯ ವ್ಯಕ್ತಪಡಿಸಿದರು.

ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಈಗಾಗಲೇ ಸರ್ಕಾರ ನೀಡಿರುವ ಶೇ. 1ರಷ್ಟು ಮೀಸಲಾತಿಗೆ ಪೊಲೀಸ್ ಇಲಾಖೆ ಇನ್ನಿತರ ಕಡೆಗಳಲ್ಲಿ ಉದ್ಯೋಗ ದೊರೆತಿರುವುದು ಆಶಾಭಾವನೆ ಹುಟ್ಟಿಹಾಕಿದೆ ಎಂದು ಹೇಳಿದರು.

ನಮ್ಮ ಪೂರ್ವಜರು ಹೆಣ್ಣನ್ನು ಶಕ್ತಿ ಸ್ವರೂಪಿಣಿ ಎಂದು ಪೂಜಿಸಿದ್ದಾರೆ. ಪರಮೇಶ್ವರನೇ ತನ್ನ ಅರ್ಧ ಶರೀರವನ್ನು ಪಾರ್ವತಿಗೆ ನೀಡಿ ಅರ್ಧ ನಾರೀಶ್ವರನಾಗಿದ್ದಾನೆ. ಅಂತಹ ದೇವರನ್ನು ಆರಾಧಿಸುವ ಈ ಸಮಾಜ ಇಂದಿಗೂ ತೃತೀಯ ಲಿಂಗಿಗಳ ಸಮುದಾಯವನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಿರುವುದು ನೋವಿನ ಸಂಗತಿ ಎಂದು ವಿಷಾದಿಸಿದರು. ತೃತೀಯ ಲಿಂಗಿಗಳನ್ನು ಕಡೆಗಣಿಸುವ ಇದೇ ಸಮಾಜ ಹರಿಹರರ ಸಮಾಗಮದಿಂದ ಜನಿಸಿದ ಅಯ್ಯಪ್ಪ ಸ್ವಾಮಿಯನ್ನು ದೇವರಾಗಿ ಆರಾಧಿಸುತ್ತದೆ. ನಮಗೂ ನಿಮ್ಮೊಂದಿಗೆ ಸಹಬಾಳ್ವೆ ನಡೆಸಲು ಅವಕಾಶ ಕೊಡಬೇಕು ಎಂದು ಅಭಿಪ್ರಾಯಪಟ್ಟರು. ಯಾವುದೇ ಮನೆಗಳಲ್ಲಿ ಹುಟ್ಟಿದ ನಮ್ಮಂತಹ ಮಕ್ಕಳನ್ನು ಪಾಲಕರು ತಿರಸ್ಕರಿಸಿ ಬೀದಿಗೆ ಬಿಟ್ಟರೆ ಅವು ಮುಂದೆ ಹೊಟ್ಟೆಗೆ ಅನ್ನ ಸಿಗದೆ ಯಾರದೋ ಕೈಗೆ ಸಿಕ್ಕು, ಭಿಕ್ಷಾಟನೆಗೆ ಇಳಿಯುತ್ತವೆ. ಇಲ್ಲವಾದರೆ ವೇಶ್ಯಾವಾಟಿಕೆಗೆ ತಳ್ಳಲ್ಪಡುತ್ತವೆ. ಆದ್ದರಿಂದ ಅವರಿಗೆ ಹಣ, ಆಸ್ತಿ ಕೊಡದಿದ್ದರೂ ಪರವಾಗಿಲ್ಲ, ಶಿಕ್ಷಣ ಕೊಡಿಸಿ ಸಮಾಜದಲ್ಲಿ ತಲೆ ಎತ್ತಿ ಬದುಕಲು ದಾರಿ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

'ನಾನು ಜಾನಪದ ಕಲೆಯನ್ನು ನಂಬಿ ಬದುಕನ್ನು ರೂಪಿಸಿಕೊಂಡವಳು. ದಾವಣಗೆರೆಯ ಹಳೆಯ ಬಸ್ ನಿಲ್ದಾಣದಲ್ಲಿ ಯುವಕನೊಬ್ಬ ಮಾಡುತ್ತಿದ್ದ ನೃತ್ಯವನ್ನು ನೋಡಿ ಪ್ರೇರಿತಳಾಗಿ ಅಡೆತಡೆಗಳ ನಡುವೆಯೂ ಕಲೆಯನ್ನು ಕಲಿಯಲು ನಿರ್ಧರಿಸಿದೆ. ಅಲ್ಲಿಂದ ಆರಂಭವಾದ ನನ್ನ ಪಯಣದಲ್ಲಿ ಹಸಿವು, ಅವಮಾನ ಮತ್ತು ಬಡತನ ಸದಾ ಜತೆಗಿದ್ದವು ಎಂದು ಸ್ಮರಿಸಿದರು.

ಸಮಯಕ್ಕೆ ಗೌರವ ಕೊಟ್ಟರೆ ಆ ಸಮಯ ಮುಂದೊಂದು ದಿನ ಅವರಿಗೆ ಗೌರವ ತಂದುಕೊಡುತ್ತದೆ. ಯಾರಿಗೂ ಹೆದರದೆ ಭಕ್ತಿ, ಶ್ರದ್ಧೆ, ಪ್ರೀತಿ ಮತ್ತು ವಿಶ್ವಾಸದಿಂದ ಕೆಲಸ ಮಾಡಿ. ನ್ಯಾಯವಾಗಿ ಬದುಕುವವರಿಗೆ ತಾವು ಆರಾಧಿಸುವ ದೈವ ಸದಾ ರಕ್ಷಣೆ ನೀಡುತ್ತದೆ. ಸಮಾಜದಲ್ಲಿ ಟೀಕೆ ಮಾಡುವವರು ಹತ್ತು ಹಲವು ಮಂದಿ ಇರುತ್ತಾರೆ. ನಾವು ಮಾಡುವ ಕೆಲಸದ ಬಗ್ಗೆ ಅಸೂಯೆ ಪಡುವವರು, ಕಾಲೆಳೆಯುವವರು ಎದುರಾಗುವುದು ಸಹಜ. ಅಂತಹ ಮಾತುಗಳಿಗೆ ಕಿವಿಗೊಡದೆ ಆನೆಯಂತೆ ಗಾಂಭೀರ್ಯದಿಂದ ನಮ್ಮ ಹಾದಿಯಲ್ಲಿ ಸಾಗಬೇಕು ಎಂದು ಸಲಹೆ ನೀಡಿದರು. ಕಾಲೇಜಿನ ಪ್ರಾಚಾರ್ಯ ಬಿ.ಪಿ. ಬಸವನಗೌಡ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ವೀರಭದ್ರಪ್ಪ, ಕಾಲೇಜು ನಿರ್ದೇಶಕ ಸೋಮಶೇಖರಪ್ಪ ಇದ್ದರು.



ದಾವಣಗೆರೆಯ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಸೋಮವಾರ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮಂಜಮ್ಮ ಜೋಗತಿ ಉದ್ಘಾಟಿಸಿದರು. ಬಿ.ಪಿ. ಬಸವನಗೌಡ, ಕೆ.ಎಸ್. ವೀರಭದ್ರಪ್ಪ, ಸೋಮಶೇಖರಪ್ಪ ಇದ್ದರು.

> ಜೀವನದಲ್ಲಿ ಸೋಲು, ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕು. ಪರೀಕ್ಷೆಯಲ್ಲಿ ಸೋತಾಗ, ಕೌಟುಂಬಿಕ ಕಲಹಗಳಾದಾಗ ಆತ್ಮಹತ್ಯೆಯಂತಹ ಅಂತಿಮ ನಿರ್ಧಾರ ಕೈಗೊಳ್ಳುವುದು ತಪ್ಪು. ಧೈರ್ಯದಿಂದ ಮುನ್ನಡೆದರೆ ಮಾತ್ರ ಬದುಕಿನಲ್ಲಿ ಸಾಧನೆ ಸಾಧ್ಯ. ಒಂದು ಕಾಲದಲ್ಲಿ ಒಂದು ರೂ.ಗೆ ನಾಲ್ಕು ಇಡ್ಲಿ ಮಾರುತ್ತಿದ್ದೆ. 2021ರಲ್ಲಿ ವಿಮಾನ ನಿಲ್ದಾಣವೊಂದರಲ್ಲಿ ಕೇವಲ ಮೂರು ಇಡ್ಲಿಗೆ 218 ರೂ. ನೀಡಿದಾಗ ಜೀವನದ ವಾಸ್ತವ ಅರಿವಾಯಿತು. ಬಡತನ ಅಥವಾ ಶ್ರೀಮಂತಿಕೆ ಯಾವುದೂ ಶಾಶ್ವತವಲ್ಲ. ಯಾವುದೇ ಸನ್ನಿವೇಶದಲ್ಲೂ ಧೃತಿಗೆಡದೆ ಬದುಕನ್ನು ಎದುರಿಸುವುದನ್ನು ಕಲಿಯಬೇಕು.
>
> | ಮಂಜಮ್ಮ ಜೋಗತಿ
> ಹಿರಿಯ ಜಾನಪದ ಕಲಾವಿದೆ